## ಇಲ್ಲಿಯವರೆಗೆ

ಸಿಡುಬಿಗೆ ಅಂಜಿ ಊರು ಬಿಟ್ಟು ಓಡಿಬಂದವನಿಗೆ ಆಲಿಂಬ್ರ ಹಲವು ಬಣ್ಣ–ಭಾವಗಳ ರಂಗಸ್ಥಳದಂತೆ ಕಾಣಿಸಿತು. ಮನೆಯೊಳಗೆ ಮಾವನ ಮಗಳು ಸುಮಿತ್ರಾಳ ಕುಡಿನೋಟ. ಊರಿನೊಳಗೆ ರಾಜಕೀಯ ಪಕ್ಷಗಳ ಕುದಿನೋಟ. ಆಲಿಂಬ್ರ ನಿಧಾನವಾಗಿ ತೆರೆದುಕೊಂಡಂತೆ, ಅಲ್ಲಿನ ಜನ ಕೂಡ ಹುಡುಗನನ್ನು ತಮ್ಮವನನ್ನಾಗಿಸಿಕೊಂಡರು. ಸಮಾಜದ ಹಲವು ವರ್ಗಗಳ ಪ್ರಯೋಗಶಾಲೆಯಂತೆ ಊರು ಕಾಣಿಸಿಕೊಳ್ಳತೊಡಗಿತು. ಆದರೆ, ಹೊಸ ಊರಿನೊಂದಿಗಿನ ಈ ನಂಟು ಎಷ್ಟು ದಿನ?



ಸಾರ್ವಜನಿಕ ಆಸ್ತಿಯೆಂದು ಎಲ್ಲರೂ ಅಂದುಕೊಂಡಿದ್ದರು. ಅಲ್ಲೇ ಬಹಳಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಸಿದ್ದೆವು. ಖ್ಯಾತ ಸಾಹಿತಿ ಹಾಗೂ ಕಥಾಪ್ರಸಂಗಂ (ಕರ್ನಾಟಕದ ಹರಿಕತೆಯಂತೆ) ವಿದ್ವಾನ್ ವೇಳೂರು ಕೃಷ್ಣನ್ ಕುಟ್ಟಿಯವರ ಕಾರ್ಯಕ್ರಮಗಳನ್ನು ಇಲ್ಲೇ ನಡೆಸಿದ್ದೆವು. ಅವರ ಎಲ್ಲಾ ಪುಸ್ತಕಗಳನ್ನು ನಾವು ಪುಸ್ತಕ ಭಂಡಾರಕ್ಕೆ ತರಿಸಿದ್ದೆವು.

ವಾಚನಾಲಯದ ವಾರ್ಷಿಕೋತ್ಸವನ್ನು ಇದೇ ವೇದಿಕೆಯಲ್ಲಿ ನಡೆಸಲಾಗಿತ್ತು. ಅಂದು ಕೋಟು ಬೂಟು ಧರಿಸಿ ಪಿಸ್ತೂಲು ಹಿಡಿದು ಬಂದು ನಾಟಕದಲ್ಲಿ ನಟಿಸಿದ ಯುವಕ ಎಲ್ಲರ ಗಮನ ಸೆಳೆದಿದ್ದ. ಅವನ ಹೆಸರು ಗೋಪೀನಾಥ. ಊರಿನ ಪ್ರಮುಖರೊಬ್ಬರ ಮಗ. ಆತ ಸುಶಿಕ್ಷಿತ, ಕಲಾವಿದ ಕೂಡ. ಗೋಪಿಯ ಹಿಂದೆ ಬಹಳಷ್ಟು ಜನ ಸೇರಿದ್ದರು.

ಮೈದಾನ ಕಳೆದುಕೊಂಡ ನಮಗೆ ಬಾಂಬೆ ಎಸ್ ಕಮಾಲಿನ ಸಂಗೀತಗೋಷ್ಠಿ ನಡೆಸಲು ಸಾಧ್ಯವಾಗಲಿಲ್ಲ. ಅದನ್ನು ಆಲಿಂಬ್ರದ ಉನ್ನತ ಶಿಕ್ಷಣ ಶಾಲೆಯಲ್ಲಿ ಏರ್ಪಡಿಸಲಾಗಿತ್ತು. ಆದರೆ ವಾಲಿಬಾಲ್ ನೋಡಲು, ಕಥಾಪ್ರಸಂಗಂ ಕೇಳಲು ಸೇರುತ್ತಿದ್ದಷ್ಟು ಜನ ಶಾಲೆಯತ್ತ ಮುಖ ಮಾಡಲಿಲ್ಲ. ಟಿಕೆಟ್ ಮಾರಿದ್ದು ಕೂಡ ನಷ್ಟದಲ್ಲಾಯಿತು. ಅಷ್ಟರಲ್ಲಿ ಊರಿನ ಕೆಲವು ಯುವಕರು ಸ್ವಯಂ ಹಾಡುಗಳನ್ನು ರಚಿಸಿ, ಸಂಗೀತ ಸಂಯೋಜಿಸಿ, ಹಾಡಿ ಹಾಡಿ ರಸ್ತೆ ಬದಿಯಲ್ಲಿ ದಣಿದು ಬಿದ್ದಿದ್ದರು.

ಆಲಿಂಬ್ರ ನನಗೆ ಗೊತ್ತಿಲ್ಲದೆಯೇ ನನ್ನ ಭವಿಷ್ಯವನ್ನು ರೂಪಿಸುತ್ತಿತ್ತು. ಊರಿನ ಪ್ರಮುಖನ ಮಗ ಗೋಪೀನಾಥನ ಉದಯ ಮತ್ತು ಬೆಳವಣಿಗೆ ತಕ್ಷಣವಾಗಿತ್ತು. ಅವನು ಅಭಿನಯಿಸಿದ ಪಾತ್ರ ಒಂದು ನಿಮಿತ್ತ ಮಾತ್ರವಾಗಿತ್ತು. ಹೀರೋನಂತಿದ್ದ ಅವನ ಒಳಗೆ ಒಬ್ಬ ಕ್ರಿಮಿನಲ್ ರಾಜಕಾರಣಿಯೂ ಇದ್ದನೆಂಬ ವಿಷಯ ಊರಿನ ಮುಗ್ಧ ಜನರಿಗೆ ತಿಳಿದಿರಲಿಲ್ಲ.

ಅವನು ಅಲ್ಲೇ ತನ್ನ ಪಕ್ಷದ ಶಾಖೆಯನ್ನೂ ಹುಟ್ಟುಹಾಕಿದ. ತನ್ನ ಪಾಲಿನ ತೆಂಗಿನಕಾಯಿ, ಗೇರುಬೀಜಗಳನ್ನೆಲ್ಲಾ ಮಾರಿ ಅವನು ಪಕ್ಷ ಬೆಳೆಯಲು ಸಹಕಾರಿಯಾದ. ಘೋಷಣೆಗಳನ್ನು ಕೂಗಲು, ಭಿತ್ತಿಪತ್ರಗಳನ್ನು ಅಂಟಿಸಲು ಕೆಲಸದವರಿದ್ದರು. ಊರಿನ ಪುಡಿ ರೌಡಿಗಳೆನಿಸಿದ ಕೊಚ್ಚಾಪ್ಪು ಮತ್ತು ಹಾಸ ಆತನ ಅಂಗರಕ್ಷಕರಾದರು.

ಒಂದೇ ಪಕ್ಷವಿದ್ದಾಗ ಊರಿನಲ್ಲಿ ರಾಜಕೀಯವಿದೆಯೆಂದು ಯಾರಿಗೂ ಗೊತ್ತಿರಲಿಲ್ಲ. ಚಂದಾ ಸಂಗ್ರಹ, ಮೆರವಣಿಗೆ ಹೋಗುವುದು, ಘೋಷಣೆಗಳನ್ನು ಕೂಗುವುದು, ಮತ ಚಲಾಯಿಸುವುದು, ಇವೆಲ್ಲವೂ ಬೇಸಗೆ, ಮಳೆ, ಚಳಿ ಕಾಲಗಳಂತೆ ಬಂದು ಹೋಗುತ್ತಿದ್ದವು. ಆದರೆ ವಿರೋಧ ಪಕ್ಷ ಬಲಶಾಲಿಯಾದಾಗ ಊರಿನ ಕಂಬಕಂಬಗಳಲ್ಲೂ ರಾಜಕೀಯ ರಂಗೇರಿತು. ಮನೋರಮ, ದೇಶಾಭಿಮಾನಿ ಪತ್ರಿಕೆಗಳನ್ನು ಗಟ್ಟಿಯಾಗಿ ಓದಿ ಹಳ್ಳಿಯ ಜನರನ್ನು ಪ್ರಜ್ಞಾವಂತರನ್ನಾಗಿ ಮಾಡುವ ಪ್ರಯತ್ನ ನಡೆಯಿತು.

ಗೋಪಿನಾಥ ಆಡಳಿತ ಪಕ್ಷದ ವಕ್ತಾರನಾಗಿದ್ದ. ಗೃಹಮಂತ್ರಿ ಆತನ ಖಾಸಾ ದೋಸ್ತ್ ಆಗಿದ್ದರು. ಗೋಪಿನಾಥನಿಗೆ ಎಲ್ಲಾ ರೀತಿಯ ನೆರವು ನೀಡುವುದಾಗಿ ಮಂತ್ರಿವರ್ಯರು ಭರವಸೆ ನೀಡಿದ್ದರು. ಎದುರಾಳಿಯ ಕರುಳನ್ನು ಸೀಳಿ ತೆಗೆದುಕೊಂಡು ಬಂದರೆ ಹಾರ ಹಾಕಿ ಸನ್ಮಾನಿಸುವುದಾಗಿ ಮಾತುಕೊಟ್ಟಿದ್ದರು.

ಗೋಪಿನಾಥನಿಗೆ ಪಕ್ಷ ಬೆಳೆಸುವ ತಂತ್ರಗಾರಿಕೆ ಚೆನ್ನಾಗಿ ತಿಳಿದಿತ್ತು. ಎದುರಾಳಿಗಳನ್ನು ಮಣಿಸಿ ತನ್ನತ್ತ ಸೆಳೆಯುವ ಸಾಮರ್ಥ್ಯವೂ ಕರಗತವಾಗಿತ್ತು. ಅದೇ ವೇಳೆಯಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಹೇರಲಾಯಿತು. ಕೆಲವೇ ದಿನಗಳಲ್ಲಿ ಗೋಪೀನಾಥ ಹೀರೋನಂತೆ ಕಾಣಿಸಿದ. ಮರುಮಗ್ಗಲಿನಲ್ಲಿ ಅವನು ಖಳನಾಯಕನಾಗಿಯೂ ಕಾಣಿಸಿಕೊಂಡ. ವಿರೋಧಿಗಳನ್ನು ಕೆರಳಿಸಲು ಅನೇಕ ಮನೆಯ ಮುಂದೆ ತನ್ನ ಪಕ್ಷದ ಬಾವುಟವನ್ನು ನೆಟ್ಟ. ಅದನ್ನು ಯಾರಾದರೂ ಮುಟ್ಟಿದರೆ ಕೈ ಕತ್ತರಿಸುವುದಾಗಿ ಬೆದರಿಕೆ ಹಾಕಿದ. ಅಷ್ಟೇ ಅಲ್ಲ, ಎದುರು ಪಕ್ಷದ ಬಾವುಟವನ್ನು, ಅದನ್ನು ಏರಿಸಿದ್ದ ಕಂಬವನ್ನು ಮಧ್ಯರಾತ್ರಿಯಲ್ಲಿ ಕಿತ್ತು ಬಿಸಾಡಿದ. ಈ ಬಾವುಟ, ಕಂಬಗಳೇ ರಾಜ್ಯದ ಎಲ್ಲೆಡೆ ಸಂಘರ್ಷ ಮತ್ತು ಗಲಭೆಗಳಿಗೆ ಕಾರಣವಾದವು.

ಪ್ರಾಥಮಿಕ ಶಾಲೆಯಲ್ಲಿ ಓದುವ ಕಾಲದಲ್ಲಿ ಮಕ್ಕಳು ಪರಸ್ಪರ ಜಗಳವಾಡುವುದಕ್ಕೆ ಒಂದು ನೆಪ – ಮೂಗು ಮುಚ್ಚುವುದು, ಸುಖಾಸುಮ್ಮಾಮನೆ ಕುಳಿತಿದ್ದ ಒಬ್ಬನ ಬಳಿ ಬಂದು ಮತ್ತೊಬ್ಬ ಹೇಳುತ್ತಾನೆ.

‘ಧೈರ್ಯವಿದ್ದರೆ ನೀನು ನನ್ನ ಮೂಗು ಮುಟ್ಟೋ’.

ಕೆಲವೊಮ್ಮೆ ಅವನು ಅದನ್ನು ಗಮನಿಸದೇ ಇರುತ್ತಾನೆ. ಆದರೆ ಪುನಃ ರೇಗಿಸುವ ಭಾಷಯಲ್ಲಿ, ‘ನೀನು ಗಂಡೇ ಆದರೆ ನನ್ನ ಮೂಗು ಮುಟ್ಟೋ’. ಆಗಲೂ ಅವನು ಮೌನವಾಗಿದ್ದರೆ ಪುನಃ ರೇಗಿಸುತ್ತಾನೆ.

‘ನೀನು ನಿನ್ನ ಅಪ್ಪನಿಗೇ ಹುಟ್ಟಿದವನಾಗಿದ್ದರೆ ಮುಟ್ಟೋ ನನ್ನ ಮೂಗು’.

‘ಅಪ್ಪ’ ಎಂದರೆ ಎಲ್ಲರ ದೌರ್ಬಲ್ಯ. ಅವನು ನಿಧಾನವಾಗಿ ತಲೆಯೆತ್ತುತ್ತಾನೆ.

‘ಮುಟ್ಟೇನಿ, ಏನೋ ಮಾಡ್ತೀಯಾ?’ ಸವಾಲು ಹಾಕುತ್ತಾನೆ.

‘ಎಲ್ಲಿ ಮುಟ್ಟು ನೋಡೋಣ.’

ಅವನು ಬಲವಾಗಿ ಮೂಗು ಮುಟ್ಟಲು ಹೇಳಿದವನ ಮೂಗನ್ನು ಮುಟ್ಟಿ ಅದುಮುತ್ತಾನೆ. ಅನಂತರ ದೂಡುವುದು, ತಳ್ಳುವುದು, ಹೊಡೆದಾಟ ಎಲ್ಲಾ ಸುರುವಾಗುತ್ತದೆ. ಕೊನೆಗೆ ಮೇಷ್ಟ್ರು ಬಂದು ಇಬ್ಬರನ್ನೂ ಗದರಿಸಿ ಸಮಾಧಾನಪಡಿಸುತ್ತಾರೆ.

ಊರ ರಾಜಕೀಯದಲ್ಲಿ ನಡೆದಿದ್ದೂ ಇದೇ. ಬಾವುಟ ಹರಿದು, ಕಂಬ ಕಿತ್ತು ಹಾಕಿದರು. ಅದು ಹೊಡೆದಾಟಕ್ಕೆ ನಾಂದಿಯಾಯಿತು. ಕೊನೆಗೆ ಅದು ಎಲ್ಲಾ ಕಡೆ ವ್ಯಾಪಿಸಿತು. ಎರಡೂ ಪಕ್ಷಗಳಲ್ಲಿ ಒಂದೊಂದು ಹೆಣ ಬಿದ್ದು, ಪೊಲೀಸಿನವರ ಪ್ರವೇಶವಾಯಿತು. ಕೇವಲ ಪೊಲೀಸರಲ್ಲ, ಕೇಂದ್ರ ಮೀಸಲು ಪಡೆಯೂ ಬಂತು. ಬಂದವರಿಗೆ ‘ಮಲಯಾಳಂ ನಹೀ ಮಾಲೂಂ’. ಉದ್ದನೆಯ ಲಾಠಿ, ಕೌಬಾಯ್ ಟೋಪ್ಪಿಯೊಂದಿಗೆ ನೀಲಿ ಬಣ್ಣದ ದೊಡ್ಡ ವ್ಯಾನಿಲ್ಲಿ ಬಂದಿಳಿದರು. ಗೃಹಮಂತ್ರಿಯ ಪ್ರೀತಿಯ ಶಿಷ್ಯ ಗೋಪೀನಾಥನಿಗೆ ಕಳುಹಿಸಿಕೊಟ್ಟ ಬಳುವಳಿ ಪೊಲೀಸ್ ಪಡೆ. ಉತ್ತರ ಭಾರತದ ದರೋಡೆಕೋರರನ್ನು ಸದೆಬಡಿಯುವಂತೆ ಮೀಸಲು ಪಡೆ ಊರವರತ್ತ ಹರಿಹಾಯ್ದರು. ‘ಹಮಾರ ಆದ್ಮಿ, ಹಮಾರ ಆದ್ಮಿ’ ಎಂದು ಹೇಳುತ್ತಾ ಗೋಪಿನಾಥನ ಅಂಗರಕ್ಷಕ ಕೊಚ್ಚಾಪ್ಪು ಕೂಗಾಡುತ್ತಿದ್ದ. ಆದರೆ ಮೀಸಲು ಪಡೆಗೆ ಶನಿ, ಸಂಕ್ರಾಂತಿಯೆಲ್ಲಾ ಒಂದೇ. ಹಮಾರ ಆದ್ಮಿಗೂ ಕೊಚ್ಚಾಪ್ಪುಗೂ ಸಾಕಷ್ಟು ಕಜ್ಜಾಯ ಸಿಕ್ಕಿದವು. ಶಾಲೆ ಪೊಲೀಸ್ ಶಿಬಿರವಾಯಿತು. ಅವರು ಆಗಾಗ ರೂಟ್‌ಮಾರ್ಚ್ ನಡೆಸಿದರು. ಹಿಟ್ಲರಿಗೂ ಬಹಳಷ್ಟು ಅಭಿಮಾನಿಗಳಿರುವಂತೆ ಅಲಿಂಬ್ರದಲ್ಲಿ ಗೋಪಿನಾಥನ ಹಿಂದೆಯೂ ಪುರುಷ ಪಡೆಯಿತ್ತು. ಗೋಪೀನಾಥ ಬೇರೆ ಊರಿನಿಂದ ಜನರನ್ನು ತಂದು ದೊಡ್ಡದೊಂದು ಜಾಥಾ ನಡೆಸಿದ. ಜಾಥಾದ ಹಿಂದೆ ಮುಂದೆ ಪೊಲೀಸ್ ಜೀಪುಗಳಿದ್ದವು. ಅಸಹ್ಯಪಡುವಂತಹ ಕೆಟ್ಟ ಮಾತುಗಳು, ಹೆಣದ ವಾಸನೆ ಹೊರಹೊಮ್ಮಿಸುವ ಕೊಲೆಯ ಕೂಗುಗಳು!

ಊರಿನಲ್ಲಿ ಗಂಡಸರೇ ಇಲ್ಲದ